# ಆನಂದಮಯ ಶ್ರೀರಾಮಕೃಷ್ಣ

**ಡಾ.ಸಿ.ಪಿ. ಕೃಷ್ಣಕುಮಾರ್**

–೧–

ಶ್ರೀರಾಮಕೃಷ್ಣ ಪರಮಹಂಸರು ದೇವಮಾನವರೂ ಹೌದು. ಮಹಾಮಾನವರೂ ಹೌದು. 'ಅವತಾರ ವರಿಷ್ಠ' ರಾಗಿಯೂ ಅವರು ಹೊರನೋಟಕ್ಕೆ ಒಬ್ಬ ಮನುಷ್ಯರೇ; ಎಂತಲೇ ನಮಗವರು ಅನ್ಯರೆನಿಸದೆ, ಆತ್ಮೀಯರೆನಿಸುತ್ತಾರೆ. ಅವರೊಮ್ಮೆ ಜಗನ್ಮಾತೆಯಲ್ಲಿ ಪ್ರಾರ್ಥಿಸಿದರಂತೆ: "ಅಮ್ಮಾ, ನನ್ನನ್ನು ಶುಷ್ಕ ಸಂನ್ಯಾಸಿಯನ್ನಾಗಿಸಬೇಡ." ಈ ಪ್ರಾರ್ಥನೆಯನ್ನು ಅವಳು ಮನ್ನಿಸಿದಳು! ಅವರೊಬ್ಬ ರಸಋಷಿ, ಪ್ರತಿಭಾನಿಧಿಯಾದ ಕವಿ; ಸೌಂದರ್ಯದ ಮೂಲಕವೂ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಮಹಾನುಭಾವ. ಅವರ ಪ್ರಥಮ ಭಾವಸಮಾಧಿ ಪ್ರಕೃತಿ ಸೌಂದರ್ಯದ ನಡುವಿನಲ್ಲೇ ಉಂಟಾಯಿತು ಎಂಬುದನ್ನು ಗಮನಿಸಲೇಬೇಕು (*ಈ ಸಂಚಿಕೆಯ ಮುಖಪುಟ ಅದನ್ನು ಬಿಂಬಿಸುತ್ತದೆ*–ಸಂ). 'ರಸೋ ವೈ ಸಃ' ಎಂಬುದು ಅವರ ನಿಲುವು ಮತ್ತು ನೆಲೆ.

ಒಂದೆಡೆ ಹೇಳುತ್ತಾರೆ, ಶ್ರೀರಾಮಕೃಷ್ಣರು: "ನಾನು ದೇವರನ್ನು ಮಾತ್ರವಲ್ಲ, ಅವನ ಲೀಲೆಗಳನ್ನು ಕೂಡ ಪ್ರೀತಿಸುತ್ತೇನೆ!" ಅವರಿಗೆ ಶಂಕರಾಚಾರ್ಯರ 'ಸಂಸಾರದುಃಖಗಹನಾತ್ ಜಗದೀಶ ರಕ್ಷ' ಎಂಬ ಮೊರೆಯಲ್ಲಿ ಅಷ್ಟಾಗಿ ಒಲವಿರಲಿಲ್ಲವಂತೆ! ಸಂಸಾರವನ್ನು ಅವರು ಹೇಯವೆಂದು ಹೇಳಿದವರೂ ಅಲ್ಲ; ದುಃಖಭೂಯಿಷ್ಠವೆಂದು ಬಗೆದವರೂ ಅಲ್ಲ.

ಈ ಹಿನ್ನೆಲೆಯಲ್ಲಿ ನೋಡಿದಾಗ, ಶ್ರೀರಾಮಕೃಷ್ಣರ ಅತಿಶಯ ಹಾಸ್ಯಪ್ರಜ್ಞೆ ಆಶ್ಚರ್ಯಕರವಾಗಿಯೇನೂ ತೋರುವುದಿಲ್ಲ. ಪ್ರಾಯಶಃ ಜಗತ್ತಿನ ಮತ್ತಾವ ಸಂತರಲ್ಲೂ ಇಷ್ಟರಮಟ್ಟಿಗೆ ವಿನೋದ ಮನೋಧರ್ಮ, ಸರಸ ಧೋರಣೆ ಹಾಗೂ ಕವಿತಾಪ್ರವೃತ್ತಿ ಕಂಡುಬರದು. ಎಲ್ಲ ದೃಷ್ಟಿಗಳಿಂದಲೂ ಶ್ರೀರಾಮಕೃಷ್ಣರು ಒಬ್ಬ ಅನನ್ಯ ಸಮನ್ವಯ ವಿಭೂತಿಯಾಗಿ ಗೋಚರಿಸುತ್ತಾರೆ.

ನಗು ಕೇವಲ ಲಘುವಲ್ಲ. ಪ್ರಾಣಿಗಳು ನಗಲಾರವು. ಎಂದರೆ, ಸರಸ ಹಾಸ್ಯಪ್ರಜ್ಞೆ ವಿಕಾಸಪಥದ ಒಂದು ಪರಿಣತಾವಸ್ಥೆಯಲ್ಲಿ ಸಿದ್ಧಿಸಿದ್ದು ಎನ್ನಬೇಕು. ಅಧ್ಯಾತ್ಮ ಪ್ರಜ್ಞೆಯಾದರೋ, ಇನ್ನೂ ಉನ್ನತವಾದ ಘಟ್ಟಕ್ಕೆ ಸಂಬಂಧಿಸಿದ್ದು. ಎರಡನ್ನೂ ಪರಸ್ಪರ ಪೂರಕವಾಗಿ ಬಳಸಿಕೊಳ್ಳುವುದು ಸಾಧ್ಯ; ಹಾಗೆ ಬಳಸಿಕೊಂಡವರು ಶ್ರೀರಾಮಕೃಷ್ಣರು. ಹಾಸ್ಯವನ್ನು ಗಹನವಾದ ಆಧ್ಯಾತ್ಮಿಕ ಸತ್ಯಗಳ ಪ್ರಕಾಶನ ಮಾಧ್ಯಮವನ್ನಾಗಿ, ವಿನೋದವನ್ನು ವೇದಾಂತ ವಿಷಯಗಳ ಆವಿಷ್ಕಾರ ಸಾಧನವನ್ನಾಗಿ ಉಪಯೋಗಿಸಿಕೊಳ್ಳುವ ಸೋಜಿಗ ಅವರಲ್ಲಿ ಕಾಣುತ್ತದೆ. ಅದೂ ಒಂದು ಸಾಕ್ಷಾತ್ಕಾರ ವಿಧಾನವೇ.

ಹಾಸ್ಯಕ್ಕಾಗಿ ಹಾಸ್ಯ ಎನ್ನಬಹುದಾದ ಪ್ರಕ್ರಿಯೆ ಮತ್ತು ಚಿಂತನ ಪ್ರಚೋದನೆಯಲ್ಲಿ ಪರ್ಯವಸಾನಗೊಳ್ಳುವ ಗಂಭೀರ ಹಾಸ್ಯ – ಎರಡಕ್ಕೂ ಶ್ರೀರಾಮಕೃಷ್ಣರ ಮಾತುಕತೆಗಳು ಆಕರವಾಗಿವೆ. ಈ ಎರಡು ನಗೆಬಗೆಗಳಿಗೂ ಇಲ್ಲಿ ಕೆಲವೇ ಕೆಲವು ನಿದರ್ಶನಗಳನ್ನು ಗಮನಿಸಬಹುದು. ಅಷ್ಟು ಎಷ್ಟೋ ಸಲ ದೃಷ್ಟಾಂತಕಥೆಗಳ ರೂಪವನ್ನು ತಳೆಯುವ



ಮೂರನೆಯ ವಿಧಾನವೂ ನಮ್ಮ ಅರಿವಿಗೆ ಬರುತ್ತದೆ. ಗೆರಕೊರೆದಂತೆ ಅವುಗಳನ್ನು ವಿಂಗಡಿಸುವುದು ಕಠಿಣ.

–೨–

ಶ್ರೀರಾಮಕೃಷ್ಣರ ಮದುವೆಯಲ್ಲಾದ ಒಂದು ಸಂಗತಿಯಿಂದಲೇ ಆರಂಭಿಸಬಹುದು. ಅಲ್ಲಿ ಅವರ 'ಮೃದುಹಾಸ್ಯಶೀಲ' ವ್ಯಕ್ತವಾಗುತ್ತದೆ. ಶ್ರೀರಾಮಕೃಷ್ಣರು ಮದುವೆಯಾದಾಗ, ಅವರ ವಧು ಶ್ರೀಶಾರದಾದೇವಿ ಇನ್ನೂ ಐದು ವರ್ಷದ ಹುಡುಗಿ. ನವವಧುವಿನ ಸಿಂಗಾರಕ್ಕಾಗಿ ರಾಮಕೃಷ್ಣರ ತಾಯಿ ಚಂದ್ರಮಣಿ ದೇವಿ ಕೆಲವು ಒಡವೆಗಳನ್ನು ಲಾಹಾ ಎಂಬ ಶ್ರೀಮಂತ ಮನೆತನದವರಿಂದ ಎರವಲಾಗಿ ತಂದಿದ್ದರು. ಕೆಲವು ದಿನಗಳ ಬಳಿಕ ಅವುಗಳನ್ನು ಮರಳಿಸಬೇಕಾಗಿ ಬಂತು. ಅವು ತನ್ನದೆಂದೇ ತಿಳಿದಿದ್ದಳು, ಆ ಪುಟ್ಟ ಶಾರದೆ! ಕೇಳಿದರೆ ಬಾಲಕಿ ಕೊಡುತ್ತಾಳೆಯೇ? ಆಕೆ ಮಲಗಿದ್ದಾಗ ಗೊತ್ತಾಗದಂತೆ, ಶ್ರೀರಾಮಕೃಷ್ಣರೇ ಅವುಗಳನ್ನು ಕಳಚಿ, ತಾಯಿಗೆ ಕೊಟ್ಟರು. ಎಚ್ಚೆತ್ತ ಮೇಲೆ ಶಾರದೆ ದುಃಖಿಸಿದಳು. ಅಂದೇ ಅಲ್ಲಿಗೆ ಬಂದ ಅವಳ ಚಿಕ್ಕಪ್ಪ ಕೋಪಿಸಿಕೊಂಡು, ಅವಳನ್ನು ತವರು ಮನೆಗೆ ಕರೆದೊಯ್ದು. ಚಂದ್ರಮಣಿ ದೇವಿಗೆ ಬಹಳ ಬೇಸರವಾಯಿತು. ಆಗ ಶ್ರೀರಾಮಕೃಷ್ಣರು ವಿಷಯ ತಿಳಿದು ತಮಾಷೆ ಮಾಡಿದರು: "ಬಿಡಮ್ಮಾ, ಅವರು ಈಗ ಏನು ಮಾಡಿದರೇನು? ಆದ ಮದುವೆಯನ್ನು ತಪ್ಪಿಸಲಾರರಷ್ಟೆ?!"

ಶ್ರೀರಾಮಕೃಷ್ಣರ ಭಗವದುನ್ಮಾದವನ್ನು ಜನರು ಸಾಮಾನ್ಯವಾದ ಹುಚ್ಚು ಎಂದು ಭಾವಿಸಿದ್ದರು. ಆದರೆ, ಅದು ಹುಚ್ಚಲ್ಲ, ಮಹಾಭಾವ, ಶ್ರೀರಾಮಕೃಷ್ಣರು ವಾಸ್ತವವಾಗಿ ಅವತಾರಪುರುಷ ಎಂದು ಭೈರವಿ ಬ್ರಾಹ್ಮಣಿ ವಿದ್ವತ್ಸಭೆಯಲ್ಲಿ ಸಾಧಾರವಾಗಿ ಸಾಬೀತುಪಡಿಸಿದಳು. ಅದನ್ನು ತಿಳಿದು ಶ್ರೀರಾಮಕೃಷ್ಣರು ಮುಗುಳ್ನಕ್ಕು ಉದ್ಗರಿಸಿದರು: "ನಾನು ಅವತಾರವೋ ಏನೋ ಎಂತಾದರಿರಲಿ. ಸದ್ಯ, ಹುಚ್ಚನಲ್ಲ ಎಂದು ತೀರ್ಮಾನವಾಯಿತಲ್ಲ. ಅಷ್ಟೇ ಸಾಕು!"

ಶ್ರೀರಾಮಕೃಷ್ಣರು ಬರಿಯ ವೇದಾಂತಲೋಲರಲ್ಲ; ವ್ಯಾವಹಾರಿಕ ಜಾಣ್ಮೆಯುಳ್ಳವರು ಕೂಡ. ಒಂದು ಸಲ ಯಾರದೋ ಮನೆಗೆ ಹೋದಾಗ ಶಿಷ್ಯರಿಗೆ ಹೇಳಿದರು: "ಹೊರಗಡೆ ಬಿಟ್ಟಿರುವ ಚಪ್ಪಲಿ ಅಲ್ಲೇ ಇದೆಯೋ, ಅಥವಾ ಯಾರಾದರೂ ಎಗರಿಸಿದ್ದಾರೋ, ನೋಡಿರಪ್ಪಾ!"

ಅವರೊಮ್ಮೆ ಶಿಷ್ಯನೊಬ್ಬನನ್ನು (ಯೋಗಿನ್) ಒಂದು ಪಾತ್ರೆ ತರುವುದಕ್ಕಾಗಿ ಅಂಗಡಿಗೆ ಕಳುಹಿಸಿದರು. ಅವನು ತಂದುದನ್ನು ಪರೀಕ್ಷಿಸಿ ನೋಡಿದಾಗ, ಅದರಲ್ಲೊಂದು ಬಿರುಕಿತ್ತು. ಆಗ ಅವರು ಯೋಗಿನ್‌ಗೆ

ಛೀಮಾರಿ ಹಾಕಿದರು: "ಭಕ್ತನಾಗಬೇಕು ಎಂದರೆ ಮೂರ್ಖನಾಗಬೇಕೆ? ವ್ಯಾಪಾರಿಯು ಧರ್ಮಕ್ಕಾಗಿ ವ್ಯಾಪಾರ ಮಾಡುತ್ತಾನೆಯೇ? ಅವನು ಕೊಟ್ಟಿದ್ದನ್ನು ಸುಮ್ಮನೆ ತಂದುಬಿಡುವುದೇ? ಕೆಲವು ಪದಾರ್ಥ ಕೊಂಡರೆ ಕೊಸರು ಕೊಡುತ್ತಾರೆ. ಅದನ್ನು ಮರೆಯದೆ ಕೇಳಿ ಪಡೆದುಕೊಳ್ಳಬೇಕು!"

ಶ್ರೀರಾಮಕೃಷ್ಣರು ಉತ್ತಮ ಅಭಿನಯಪಟುಗಳಾಗಿದ್ದರು. (ಬಾಲ್ಯದಲ್ಲಿ ಅವರು ತಮ್ಮ ಸಂಗಡಿಗರೊಡಗೂಡಿ, ಅನೇಕ ನಾಟಕಗಳನ್ನು ಆಡುತ್ತಿದ್ದರು ಎನ್ನುವುದನ್ನು ನೆನೆಯಬಹುದು.) ಒಮ್ಮೆ ಅವರು ಭಕ್ತರೆದುರು ಒಬ್ಬಳು ಕೀರ್ತನಕಾರ್ತಿಯ ಹಾವಭಾವಗಳನ್ನು ಅನುಕರಿಸಿ ತೋರಿಸಿದರು. ಆವಳು ಒಡವೆ ಹಾಕಿಕೊಳ್ಳುವುದು, ಸೀರೆ ಉಟ್ಟುಕೊಳ್ಳುವುದು, ನಿಂತುಕೊಳ್ಳುವುದು, ಕೈಯಲ್ಲಿ ವಸ್ತ್ರ ಹಿಡಿದುಕೊಳ್ಳುವುದು, ನಡುನಡುವೆ ಸ್ವಲ್ಪ ಕೆಮ್ಮುವುದು, ಮುಖವನ್ನು ಒಂದೆಡೆ ಸರಿಸಿ ಮೂಗನ್ನು ಒರೆಸಿಕೊಳ್ಳುವುದು, ಯಾರಾದರೂ ದೊಡ್ಡ ಮನುಷ್ಯರು ಬಂದರೆ ಹಾಡಿನ ಮಧ್ಯದಲ್ಲಿ ಅವರಿಗೆ "ಬನ್ನಿ, ಕುಳಿತುಕೊಳ್ಳಿ" ಎನ್ನುವುದು, ಕೊರಳಿನಲ್ಲಿ ಧರಿಸಿರುವ ಒಡವೆಗಳನ್ನು ತೋರಿಸಲು ಸೆರಗನ್ನು ಮೇಲಿಂದ ಮೇಲೆ ಸರಿಸುವುದು–ಹೀಗೆ. ಅದನ್ನು ನೋಡಿ ಎಲ್ಲರೂ ಗೊಳ್ಳೆಂದು ನಕ್ಕರು.

ಒಮ್ಮೆ ಅವರು ಊಟಮಾಡಿದ ಮೇಲೆ "ಹೊಟ್ಟೆ ತುಂಬಿ ಹೋಯಿತು. ಇನ್ನು ಒಂದು ತುತ್ತಿಗೂ ಜಾಗವಿಲ್ಲ" ಎಂದರು. ಆಗ ಯಾರೋ "ಇನ್ನೊಂದು ಜಿಲೇಬಿ ಹಾಕಿಸಿಕೊಳ್ಳಿ" ಎಂದಾಗ, "ಹಾಗಾದರೆ ತನ್ನಿ!" ಎಂದರು. "ಸ್ವಲ್ಪವೂ ಜಾಗವಿಲ್ಲ ಎಂದಿರಲ್ಲ! " ಎಂದಾಗ, ಶ್ರೀರಾಮಕೃಷ್ಣರು ವಿವರಣೆ ಕೊಟ್ಟರು: " ಜಿಲೇಬಿ ಎಂದರೆ ಗವರ್ನರ್ ಗಾಡಿ ಇದ್ದಹಾಗೆ. ರಸ್ತೆಯಲ್ಲಿ ಎಷ್ಟೇ ಜನಜಂಗುಳಿಯಿದ್ದರೂ ಗವರ್ನರ್ ಗಾಡಿ ಬಂದಾಗ ಹೇಗೋ ಅದಕ್ಕೆ ಜಾಗ ಮಾಡಿಕೊಡುವುದಿಲ್ಲವೇ?" ಅಂದಹಾಗೆ, ಜಿಲೇಬಿ ಶ್ರೀರಾಮಕೃಷ್ಣರಿಗೆ ಬಹಳ ಪ್ರಿಯವಾದ ತಿಂಡಿ.

ಶ್ರೀರಾಮಕೃಷ್ಣರಿಗೆ ಇಂಗ್ಲೀಷ್ ಬರುತ್ತಿರಲಿಲ್ಲ. ಅವರಿಗೆ ಬರುತ್ತಿದ್ದ ಕೆಲವೇ ಕೆಲವು ಇಂಗ್ಲೀಷ್ ಶಬ್ದಗಳಲ್ಲಿ 'ಥ್ಯಾಂಕ್ ಯೂ' ಕೂಡ ಒಂದು. ಒಮ್ಮೆ ಕೆಲವರು ತಮ್ಮ ತಮ್ಮಲ್ಲೇ ಇಂಗ್ಲೀಷಿನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಶ್ರೀರಾಮಕೃಷ್ಣರಿಗೆ ಅರ್ಥವಾಗಲಿಲ್ಲ. ಅವರು ಹೇಳಿದರು: " ನಿಮ್ಮ ಮಾತುಗಳನ್ನು ಕೇಳಿದಾಗ ನನಗೊಂದು ಕತೆ ನೆನಪಿಗೆ ಬರುತ್ತದೆ. ಒಬ್ಬ ಕ್ಷೌರಿಕ ಒಬ್ಬ ದೊಡ್ಡ ಮನುಷ್ಯನಿಗೆ ಕ್ಷೌರ ಮಾಡುತ್ತಿದ್ದ. ಆಗ ಕತ್ತಿ ಮುಖಕ್ಕೆ ಸ್ವಲ್ಪ ತಾಕಿತು. ಅವನು ಬೇಸರದಿಂದ ಉದ್ಗರಿಸಿದ: "ಡ್ಯಾಮ್! (damn)." ಕ್ಷೌರಿಕನಿಗೆ ಅದರ ಅರ್ಥ ತಿಳಿಯಲಿಲ್ಲ. ಅವನು ಅರ್ಥ ಕೇಳಿದ. ಅದಕ್ಕೆ ಆ ದೊಡ್ಡ ಮನುಷ್ಯ, "ಏನೂ ಇಲ್ಲ! ಇನ್ನು ಮೇಲೆ ಹುಷಾರಾಗಿ ಕ್ಷೌರ ಮಾಡು" ಎಂದ. ಕ್ಷೌರಿಕನಿಗೆ ರೋಸಿ ಹೋಯಿತು. ಅವನು ಹೇಳಿದ, "ನೋಡಿ, ಡ್ಯಾಮ್‌ಗೆ ಏನಾದರೂ ಒಳ್ಳೆಯ ಅರ್ಥ ಇದ್ದರೆ, ನಾನೂ ಡ್ಯಾಮ್, ನನ್ನಪ್ಪ ಡ್ಯಾಮ್, ನಮ್ಮಜ್ಜ ಡ್ಯಾಮ್, ನಮ್ಮ ಹದಿನಾಲ್ಕು ತಲೆಯ ತನಕ ಡ್ಯಾಮ್!! ಅದಕ್ಕೆ ಏನಾದರೂ ಕೆಟ್ಟ ಅರ್ಥ ಇದ್ದರೆ, ನೀವೂ ಡ್ಯಾಮ್, ನಿಮ್ಮಪ್ಪ ಡ್ಯಾಮ್, ನಿಮ್ಮಜ್ಜ ಡ್ಯಾಮ್, ನಿಮ್ಮ ಹದಿನಾಲ್ಕು ತಲೆಯವರೆಲ್ಲ ಡ್ಯಾಮ್, ಡ್ಯಾಮ್ ಡ್ಯಾಮ್!!!"

ಶ್ರೀರಾಮಕೃಷ್ಣರು ಹೇಳಿದ ಇನ್ನೊಂದು ಪ್ರಸಂಗ ಇದು: "ಒಂದು ಹಳ್ಳಿಯಲ್ಲಿ ಒಬ್ಬ ಒಂದು ಬಯಲುನಾಟಕ ನೋಡಲು ಹೋದ. ಜನ ಇನ್ನೂ ಸೇರಿರಲಿಲ್ಲ; ನಾಟಕ ಶುರುವಾಗಲೂ ಇಲ್ಲ. ಚಾಪೆ ಹಾಕಿ ಮಲಗಿಕೊಂಡ. ಗಾಢನಿದ್ರೆ ಬಂತು. ಎಚ್ಚರವಾಗಿ ಕಣ್ಣು ಬಿಟ್ಟು ನೋಡಿದಾಗ, ನಾಟಕ ಮುಗಿದುಹೋಗಿತ್ತು! ಸುತ್ತ ಯಾರೂ ಇರಲಿಲ್ಲ. ಚಾಪೆ ಸುತ್ತಿಕೊಂಡು ವಾಪಸು ಮನೆಗೆ ಹೋದ!"

ನರೇಂದ್ರ ತಮ್ಮ ಸಂಪರ್ಕಕ್ಕೆ ಬಂದಮೇಲೆ ಶ್ರೀರಾಮಕೃಷ್ಣರು ಹೇಳಿದ್ದರು: " ನರೇಂದ್ರನನ್ನು ನೋಡಿದಾಗ, ಒಬ್ಬ ಜೊತೆಗಾರ ಸಿಕ್ಕಿದ ಎಂದು ಭಾವಿಸಿದೆ. ಆದರೆ ಅವನೂ 'ನನಗೆ ಅಪ್ಪ, ಅಮ್ಮ ಇದ್ದಾರೆ!' ಎಂದು ಕಿರುಚಿಕೊಂಡ. ಒಂದು ಭೂತ ಇತ್ತು. ಇದಕ್ಕೆ ಒಂಟಿಯಾಗಿದ್ದು ಬೇಸರವಾಗಿತ್ತು; ಯಾರಾದರೂ ಜೊತೆಗಾರರು ಬೇಕಾಗಿತ್ತು. ಶನಿವಾರ, ಮಂಗಳವಾರ ಯಾರಾದರೂ ಅಕಾಲ ಮರಣ ಹೊಂದಿದರೆ, ಭೂತವಾಗುತ್ತಾರೆ ಎಂದು ಅದು ಕೇಳಿತ್ತು. ಆ ದಿನಗಳಲ್ಲಿ ಅದು ಯಾರಾದರೂ ಅಪಘಾತಕ್ಕೀಡಾದವರ ಹತ್ತಿರ ಹೋಗಿ ನಿಲ್ಲುತ್ತಿತ್ತು. ಆದರೆ, ಪಾಪ, ಅವರಲ್ಲಿ ಬಹುತೇಕ ಮಂದಿ ಚೇತರಿಸಿಕೊಂಡು ಬಿಡುತ್ತಿದ್ದರು. ಭೂತ ಕಡೆಗೂ ಒಂಟಿಯಾಗಿ ಉಳಿಯಿತು. ಅದರ ದುರದೃಷ್ಟ!"

ದೇವರ ಹೆಸರಿನಲ್ಲಿ ಮೋಸ ಮಾಡುತ್ತಿದ್ದವರ ಕತೆಯೊಂದನ್ನು ಶ್ರೀರಾಮಕೃಷ್ಣರು ಹೇಳುತ್ತಾರೆ. ಒಂದು ಊರಿನಲ್ಲಿ ಒಂದು ಅಕ್ಕಸಾಲಿಗಳ ಅಂಗಡಿ. ಅದರ ಮಾಲೀಕ ಮಹಾ 'ಭಕ್ತ'. ಹಣೆಯಲ್ಲಿ ದೊಡ್ಡ ತಿಲಕ; ಕೊರಳಲ್ಲಿ ತುಳಸೀಮಾಲೆ; ಬಾಯಲ್ಲಿ ಹರಿನಾಮೋಚ್ಚಾರಣೆ. ಇದನ್ನೆಲ್ಲ ನೋಡಿ, ಗಿರಾಕಿಗಳು ನಿಶ್ಶಂಕೆಯಿಂದ ಅಂಗಡಿಗೆ ಬರುತ್ತಿದ್ದರು. ಅಗ ಒಬ್ಬ ಕೆಲಸಗಾರ 'ಕೇಶವ' ಎನ್ನುತ್ತಿದ್ದ; ಮತ್ತೊಬ್ಬ 'ಗೋಪಾಲ' ಎನ್ನುತ್ತಿದ್ದ; ಇನ್ನೊಬ್ಬ 'ಹರಿ' ಎನ್ನುತ್ತಿದ್ದ. ಮತ್ತೊಬ್ಬ 'ಹರ' ಎನ್ನುತ್ತಿದ್ದ. ಕಡೆಗೆ ಎಲ್ಲರೂ 'ಹರಹರ' ಎನ್ನುತ್ತಿದ್ದರು! ಅದರ ರಹಸ್ಯವೇ ಬೇರೆ: 'ಕೇಶವ' ಎಂದರೆ 'ಇವನಾರು?'; 'ಗೋಪಾಲ' ಎಂದರೆ 'ಗಿರಾಕಿ ದಡ್ಡ'; 'ಹರಿ' ಎಂದರೆ 'ವಂಚಿಸೋಣವೇ?'; 'ಹರ' ಎಂದರೆ 'ಆಗಲಿ!'

ಒಂದೇ ವರದಿಂದ ಹಲವು ಆಸೆಗಳನ್ನು ಈಡೇರಿಸಿಕೊಂಡ ಚತುರನ ಬಗೆಗೆ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಮಕ್ಕಳಿಲ್ಲದ ಒಬ್ಬ ಬಡವ ತಪಸ್ಸು ಮಾಡಿ, ದೇವರನ್ನು ಮೆಚ್ಚಿಸಿದ. ದೇವರು ಪ್ರಸನ್ನನಾಗಿ, ಒಂದೇ ಒಂದು ವರ ಕೊಡುವುದಾಗಿ ಹೇಳಿದ. ಆಗ ಆ ಆಸಾಮಿ ಈ ವರ ಕೇಳಿಕೊಂಡ: "ನಾನು ನನ್ನ ಮೊಮ್ಮಕ್ಕಳ ಜೊತೆಯಲ್ಲಿ ಚಿನ್ನದ ತಟ್ಟೆಯಲ್ಲಿ ಊಟ ಮಾಡುವಂತೆ ಕರುಣಿಸು!" ದೇವರೇ ಬೇಸ್ತು ಬಿದ್ದ. ದೀರ್ಘಾಯುಷ್ಯ, ಐಶ್ವರ್ಯ, ಮಕ್ಕಳು, ಮೊಮ್ಮಕ್ಕಳು ಎಲ್ಲವನ್ನೂ ಒಂದೆ ವರದಲ್ಲಿ ಕೇಳಿಬಿಟ್ಟಿದ್ದ, ಆ ಬುದ್ಧಿವಂತ.

ಇದೊಂದು ಜಿಪುಣನ ಕಥೆ. ಅವನು ತನ್ನ ಜಿಪುಣತನದಿಂದ ಬಹಳ ಹಣ ಕೂಡಿಹಾಕಿದ್ದ. ಅವನ ಮರಣದ ಸಮಯದಲ್ಲಿ ನೆಂಟರಿಷ್ಟರೆಲ್ಲ ಬಂದು ಸುತ್ತ ನೆರೆದರು. ಸಾಯುವವನ ಮುಖ ಚೆನ್ನಾಗಿ ಕಾಣಲಿ ಎಂದು ದೀಪವನ್ನು ಸ್ವಲ್ಪ ದೊಡ್ಡದು ಮಾಡಿದರು. ಅಗ ಅವನು ಹೇಳಿದ: " ದೀಪವನ್ನು ಏತಕ್ಕೆ ಇಷ್ಟು ದೊಡ್ಡದು ಮಾಡಿದಿರಿ! ಎಷ್ಟೊಂದು ಎಣ್ಣೆ ಖರ್ಚಾಗುತ್ತದೆ!"

ಧನಮದ ಎಂಥದು ಎಂಬುದಕ್ಕೆ ಶ್ರೀರಾಮಕೃಷ್ಣರು ಒಂದು ನಿದರ್ಶನ ಕೊಡುತ್ತಾರೆ. ಒಂದು ಗೂಡಿನಲ್ಲಿ ಒಂದು ಕಪ್ಪೆಯಿತ್ತು. ಅದಕ್ಕೆ ಒಂದು ರೂಪಾಯಿ ಸಿಕ್ಕಿತು. ಅದನ್ನಿಟ್ಟುಕೊಂಡ ಕಪ್ಪೆ ತಾನೇ ಭಾಗ್ಯಶಾಲಿಯೆಂದು ಬೀಗಿತು. ಒಂದು ದಿನ ಆನೆಯೊಂದು ಕಪ್ಪೆಯನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಆ ಕಡೆ ಹೋಗುತ್ತಿತ್ತು. ಕಪ್ಪೆಗೆ ಬಹಳ ಕೋಪ ಬಂತು. ಗೂಡಿನಿಂದ ಹೊರಗೆ ಬಂದು ಆನೆಯನ್ನು ಗದರಿಸಿತು: " ಏನು! ನನ್ನ ಗೂಡನ್ನು ದಾಟಿಹೋಗುವಷ್ಟು ಧೈರ್ಯವೇ ನಿನಗೆ?" ಮತ್ತೊಮ್ಮೆ ಒಬ್ಬಾತ ರಾಮಕೃಷ್ಣರನ್ನು "ಏನು ಪೂಜಾರಿಗಳೇ! ಹೇಗಿದ್ದೀರಿ? " ಎಂದು ಲಘುವಾಗಿ ಮಾತನಾಡಿಸಿದಾಗ, ಅವರು ಅಂದುಕೊಂಡರಂತೆ: "ಇವನಿಗೆಲ್ಲೋ ಹಣ ಸಿಕ್ಕಿರಬೇಕು!"

(ಮುಂದಿನ ತಿಂಗಳು: ಶ್ರೀರಾಮಕೃಷ್ಣರ ವೇದಾಂತಬೋಧಕ ಹಾಸ್ಯ)